ಕರ್ನಾಟಕ ಸರ್ಕಾರ

## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ ಬೆಂಗಳೂರು-560 003

ಸಂಖ್ಯೆ:ಎಸ್5/ಸಿ:ಗ.ಯಂ.ಶಿ.ಪ/ಜುಲೈ/ಆಗಸ್ಟ್-2019/73 /2018-19 ದಿನಾಂಕ:11.06.2019

### ಅಧಿಸೂಚನೆ

ವಿಷಯ: ಜುಲೈ/ಆಗಸ್ಟ್-2019 ರ ಮಾಹೆಯಲ್ಲಿ ನಡೆಯಲಿರುವ ಗಣಕಯಂತ್ರ ಶಿಕ್ಷಣ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಇಡಿ:135ಎಸ್‌ಒಹೆಚ್ 2011 ದಿನಾಂಕ:28.05.2013
2. ಆಯುಕ್ತರು, ಸಾ.ಶಿ.ಇಲಾಖೆ ಮತ್ತು ಅಧ್ಯಕ್ಷರು, ಕ.ಪ್ರೌ.ಶಿ.ಪ.ಮಂಡಳಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:02.01.2019 ರಂದು ನಡೆದ ಸಭಾ ನಡಾವಳಿ.

******

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ವತಿಯಿಂದ ಜುಲೈ/ಆಗಸ್ಟ್-2019ರ ಮಾಹೆಯಲ್ಲಿ ನಡೆಯುವ ಆಫೀಸ್‌ಆಟೋಮೇಷನ್ (ಓಎ) ಹಾಗೂ ಗ್ರಾಫಿಕ್ ಡಿಸೈನರ್‌ಕೋರ್ಸ್ (ಜಿಡಿಸಿ) ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಪರೀಕ್ಷೆಗೆ, ಸರ್ಕಾರದಿಂದ ನೋಂದಣಿಯಾಗಿ ಪ್ರಥಮ ಮಾನ್ಯತೆಯನ್ನು ಪಡೆದಿರುವ ಕಂಪ್ಯೂಟರ್ ಸಂಸ್ಥೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಅಭ್ಯರ್ಥಿಗಳು ಅರ್ಹರಾಗಿದ್ದು, ಮಂಡಳಿಯು ನಡೆಸುವ ಆಫೀಸ್‌ಆಟೋಮೇಷನ್ ಹಾಗೂ ಗ್ರಾಫಿಕ್ ಡಿಸೈನರ್‌ಕೋರ್ಸ್ ವಿಷಯದ ಪರೀಕ್ಷೆಗೆ ಹಾಜರಾಗಬಹುದಾಗಿರುತ್ತದೆ. ಆಫೀಸ್‌ಆಟೋಮೇಷನ್ ಪರೀಕ್ಷೆ ತೆಗೆದುಕೊಳ್ಳಲು ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರಬೇಕು ಮತ್ತು ಗ್ರಾಫಿಕ್‌ಡಿಸೈನರ್‌ಕೋರ್ಸ್ ಪರೀಕ್ಷೆ ತೆಗೆದುಕೊಳ್ಳಲು ಆಫೀಸ್‌ಆಟೋಮೇಷನ್ ಉತ್ತೀರ್ಣರಾಗಿರಬೇಕು ಹಾಗೂ ಆಫೀಸ್‌ಆಟೋಮೇಷನ್ ಪರೀಕ್ಷೆಯಲ್ಲಿ ಪಾಸಾಗಿರುವ ಬಗ್ಗೆ ದೃಢೀಕೃತ ಅಂಕಪಟ್ಟಿ ಸಲ್ಲಿಸಬೇಕು.ಈ ಪರೀಕ್ಷೆಯು 6 ತಿಂಗಳ ಕೋರ್ಸ್‌ಆಗಿದ್ದು ಸಂಸ್ಥೆಗಳು ಕನಿಷ್ಠ 80 ದಿನಗಳು ಶಾಲಾ ಕಾರ್ಯವನ್ನು (Working days) ನಿರ್ವಹಿಸಬೇಕು ಹಾಗೂ ವಿದ್ಯಾರ್ಥಿಗಳ ಕನಿಷ್ಠ ಹಾಜರಾತಿ ಶೇಕಡ 75 ಕಡ್ಡಾಯವಾಗಿರಬೇಕು. (ಥಿಯರಿ ಮತ್ತು ಪ್ರಾಯೋಗಿಕ ಪರೀಕ್ಷೆಗಳಿಗೆ) ಸಂಸ್ಥೆಯವರು ಅರ್ಹ ವಿದ್ಯಾರ್ಥಿಗಳ ಅರ್ಜಿಗಳನ್ನು ಆನ್‌ಲೈನ್ ಮೂಲಕ ನಮೂದಿಸಿ ಆನ್‌ಲೈನ್‌ನಲ್ಲಿ ಸಲ್ಲಿಸಿದ ನಂತರ ಕಂಪ್ಯೂಟರ್‌ನಲ್ಲಿ ವಿವಿಧ ನಮೂನೆಯ ಮಾಹಿತಿಗಳನ್ನು ಮುದ್ರಿಸಿಕೊಂಡು ಈ ಕೆಳಕಂಡ ವಿಳಾಸಕ್ಕೆ ಖುದ್ದಾಗಿ ಅಥವಾ ರಿಜಿಸ್ಟರ್ಡ್ ಅಂಚೆ ಮುಖಾಂತರ ಕಳುಹಿಸುವುದು.

**ಶ್ರೀಮತಿ ಹೇಮಲತಾ ಡಿ. ನಾಯಕ್,**
**ಸಹಾಯಕ ನಿರ್ದೇಶಕರು ಮತ್ತು ಶಾಖಾಧಿಕಾರಿಗಳು,**
**ವಾಣಿಜ್ಯ ವಿಭಾಗ, 4ನೇ ಮಹಡಿ,**
**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,**
**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003.**
**ಮೊಬೈಲ್ ಸಂಖ್ಯೆ: 9686333455**
**ಮಂಡಳಿಯ ದೂರವಾಣಿ ಸಂಖ್ಯೆಗಳು : 080-23360073**
**ಇ.ಮೇಲ್ ವಿಳಾಸ:- dpioekseeb@gmail.com**

ಮಂಡಳಿಗೆ ಈ ಕೆಳಕಂಡಂತೆ ದಾಖಲೆಗಳನ್ನು ಖುದ್ದಾಗಿ ಅಥವಾ ರಿಜಿಸ್ಟರ್ಡ್ ಅಂಚೆ ಮುಖಾಂತರ ತಪ್ಪದೇ ಕಳುಹಿಸುವುದು.

1. ವಿಷಯವಾರು ನಾಮಾಂಕಿತ ಪಟ್ಟಿ,
2. ವಿಷಯವಾರು, ಮತ್ತು ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಪಾವತಿಸಿದ ಶುಲ್ಕದ ವಿವರದ ನಮೂನೆ.
3. ಮೂಲ ಚಲನ್‌ಗಳು

4. ಶಾಲೆಯ ಮಾನ್ಯತೆ ನವೀಕರಣ ಪತ್ರ ಹಾಗೂ ಇತರೆ ಮಾಹಿತಿಗಳನ್ನು ಸಲ್ಲಿಸುವುದು.

ವಿದ್ಯಾರ್ಥಿಗಳಅರ್ಹತೆ, ಹಾಜರಾತಿಗಳಲ್ಲಿ ಏನಾದರೂ ವ್ಯತ್ಯಾಸವಿದ್ದಲ್ಲಿ ಸಂಸ್ಥೆಯ ಮುಖ್ಯಸ್ಥರೇ ಹೊಣೆಗಾರರಾಗುತ್ತಾರೆ

**ಪರೀಕ್ಷಾ ವಿಷಯ ಮತ್ತು ಪರೀಕ್ಷಾ ಶುಲ್ಕದ ವಿವರ**

**ಆಫೀಸ್ಆಟೋಮೇಷನ್**

| ಪರೀಕ್ಷಾ ವಿಷಯ | ವಿಷಯ ಸಂಕೇತ | ಪರೀಕ್ಷಾ ಶುಲ್ಕದ ವಿವರ | | ಒಟ್ಟು ಶುಲ್ಕ |
|---|---|---|---|---|
| | | ಪರೀಕ್ಷಾ ಶುಲ್ಕ | ಲ್ಯಾಮಿನೇಷನ್ ಶುಲ್ಕ | |
| ಆಫೀಸ್ಆಟೋಮೇಷನ್ (ಥಿಯರಿ) | 41-X | 500–00 | 20–00 | 520 |
| ಆಫೀಸ್ಆಟೋಮೇಷನ್ (ಪ್ರಾಯೋಗಿಕ) | 41-Y | | | |

**ಗ್ರಾಫಿಕ್‌ಡಿಸೈನರ್‌ಕೋರ್ಸ್**

| ಪರೀಕ್ಷಾ ವಿಷಯ | ವಿಷಯ ಸಂಕೇತ | ಪರೀಕ್ಷಾ ಶುಲ್ಕದ ವಿವರ | | ಒಟ್ಟು ಶುಲ್ಕ |
|---|---|---|---|---|
| | | ಪರೀಕ್ಷಾ ಶುಲ್ಕ | ಲ್ಯಾಮಿನೇಷನ್ ಶುಲ್ಕ | |
| ಗ್ರಾಫಿಕ್‌ಡಿಸೈನರ್‌ಕೋರ್ಸ್ (ಥಿಯರಿ) | 42-X | 800–00 | 20–00 | 820 |
| ಗ್ರಾಫಿಕ್‌ಡಿಸೈನರ್‌ಕೋರ್ಸ್ (ಪ್ರಾಯೋಗಿಕ) | 42-Y | | | |

**ಪರೀಕ್ಷಾ ಶುಲ್ಕವನ್ನು ಈ ಕೆಳಗೆ ನಿಗದಿಪಡಿಸಿರುವ ದಿನಾಂಕಗಳೊಳಗೆ ಪಾವತಿಸುವುದು.**

| ಕ್ರಸಂ | ವಿವರ | ದಿನಾಂಕ: |
|---|---|---|
| 1 | ಗಣಕಯಂತ್ರ ಶಿಕ್ಷಣ ಸಂಸ್ಥೆಗಳಿಂದ ಅರ್ಜಿಗಳನ್ನು ಆನ್ ಲೈನ್‌ನಲ್ಲಿ ಭರ್ತಿ ಮಾಡಲು ಪ್ರಾರಂಭದ ದಿನಾಂಕ | 24.06.2019 |
| 2 | ಗಣಕಯಂತ್ರ ಶಿಕ್ಷಣ ಸಂಸ್ಥೆಗಳಿಂದ ಅರ್ಜಿಗಳನ್ನು ಆನ್ ಲೈನ್‌ನಲ್ಲಿ ಭರ್ತಿ ಮಾಡಲುಕೊನೆಯದಿನಾಂಕ | 04.07.2019 |
| 3 | ಗಣಕಯಂತ್ರ ಶಿಕ್ಷಣ ಸಂಸ್ಥೆಗಳಿಂದ ಶುಲ್ಕ ಪಾವತಿಸಿದ ಬಗ್ಗೆ ಮೂಲ ಬ್ಯಾಂಕ್ ಚಲನ್(ಶಾಲಾವಾರು) ಮತ್ತು ವಿದ್ಯಾರ್ಥಿಗಳ ವಿವಿಧ ವಿವರಗಳ ನಮೂನೆಗಳನ್ನು ಕಂಪ್ಯೂಟರ್‌ನಲ್ಲಿ ಮುದ್ರಿಸಿಕೊಂಡು ಮಂಡಳಿಗೆ ರವಾನಿಸುವ ಕೊನೆಯ ದಿನಾಂಕ | 06.07.2019 |

**ಪರೀಕ್ಷಾ ಶುಲ್ಕವನ್ನು ಶಾಲಾವಾರು (ಸಂಸ್ಥೆಯಎಲ್ಲಾ ವಿದ್ಯಾರ್ಥಿಗಳ) ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ನಿರ್ದೇಶಕರು (ಇತರೆ ಪರೀಕ್ಷೆಗಳು), ಉಳಿತಾಯ ಖಾತೆ ಸಂಖ್ಯೆ 1261000109019723, IFSC CODE; PUNB012610, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರುರವರ ಹೆಸರಿಗೆ NEFT ಚಲನ್ ಮೂಲಕ ದಿನಾಂಕ: 04.07.2019 ರೊಳಗೆ ಪಾವತಿಸುವುದು.** ನಿಗಧಿತ ದಿನಾಂಕದ ನಂತರ ಶುಲ್ಕ ಪಾವತಿಗೆ ಅವಕಾಶವಿಲ್ಲ. ಯಾವುದೇ ವಿದ್ಯಾರ್ಥಿಯ ಶುಲ್ಕವನ್ನು ನಿಗದಿತ ದಿನಾಂಕದ ನಂತರ ಚಲನ್ ಮೂಲಕ ಪಾವತಿಸಿದಲ್ಲಿ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಹಾಗೂ ಪರೀಕ್ಷಾ ಶುಲ್ಕವನ್ನು ಪಾವತಿಸಿದ್ದರೂ ಸಹ ಹಿಂದಿರುಗಿಸಲಾಗುವುದಿಲ್ಲ

1. ಮಂಡಳಿ ನಿಗಧಿಪಡಿಸಿದ ದಿನಾಂಕಗಳು ಸರ್ಕಾರಿ ರಜಾ ದಿನವೆಂದು ಘೋಷಿಸಲ್ಪಟ್ಟಿದ್ದಲ್ಲಿ ಆ ದಿನಗಳ ಮಾರನೆಯ ಕೆಲಸದ ದಿನವನ್ನು ಕೆಲಸದ ಕೊನೆಯ ದಿನವೆಂದು ಪರಿಗಣಿಸಲಾಗುವುದು.

2. ಕಡ್ಡಾಯವಾಗಿಕಂಪ್ಯೂಟರ್ ಶಾಲೆಯ ಪ್ರಸಕ್ತ ವರ್ಷದ ಮಾನ್ಯತೆ/ಮಾನ್ಯತೆ ನವೀಕರಣ ಪಡೆದಿರುವುದಕ್ಕೆ ಸಂಬಂಧಿಸಿದ ಸಹನಿರ್ದೇಶಕರಿಂದ ಪಡೆದ ಜ್ಞಾಪನ ಪ್ರತಿ ಲಗತ್ತಿಸುವುದು
3. ಕಂಪ್ಯೂಟರ್ ಶಾಲೆಗಳ ಶಾಲಾ ಸಂಕೇತ ನವೀಕರಣ ಶುಲ್ಕ ರೂ.300–00ಗಳನ್ನು NEFT ಚಲನ್ ಮೂಲಕ ಪಾವತಿಸಬೇಕು. ವಾರ್ಷಿಕ ನವೀಕರಣ ಶುಲ್ಕ ಪಾವತಿಸಿದ್ದ ಪಕ್ಷದಲ್ಲಿ NEFT ಚಲನ್‌ನ ಜೆರಾಕ್ಸ್ ಪ್ರತಿಯನ್ನು ಪ್ರತ್ಯೇಕವಾಗಿ ಮಂಡಳಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಪತ್ರ ವ್ಯವಹಾರಕ್ಕೆ ಅನುಕೂಲಕರವಾದ ಅಂಚೆ ವಿಳಾಸ, ದೂರವಾಣಿ ಸಂಖ್ಯೆ ಅಥವಾ ಮೊಬೈಲ್ ಫೋನ್ ಸಂಖ್ಯೆ ತಪ್ಪದೆ ನಮೂದಿಸುವುದು.
4. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿಇರುವುದಿಲ್ಲ.
5. ಅರ್ಜಿ ಸಲ್ಲಿಸಿದ ನಂತರ ವಿಷಯ ಸಂಕೇತದ ಬದಲಾವಣೆಗೆ ಅರ್ಜಿ ಸಲ್ಲಿಸಿದಲ್ಲಿ ತಪ್ಪಿಗೆ **ರೂ.500.00** ದಂಡ ವಿಧಿಸಲಾಗುವುದು. ಮಂಡಳಿಯ ಗಮನಕ್ಕೆ ತರದೇ ಪರೀಕ್ಷಾ ಕೇಂದ್ರದಲ್ಲೇ ಬದಲಾವಣೆ ಮಾಡಿಕೊಂಡು ಪರೀಕ್ಷೆ ಮುಗಿಸಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ಗಣಕಯಂತ್ರ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
6. ಅರ್ಜಿಯಲ್ಲಿ ವಿದ್ಯಾರ್ಥಿ/ತಂದೆ/ಇನ್ಯಾವುದೇ ವಿವರವನ್ನು ತಪ್ಪಾಗಿ ವಿವರ ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ, ಸರಿಪಡಿಸಲು ಪ್ರತಿ ತಪ್ಪಿಗೆ **ರೂ.100=00** ದಂಡ ವಿಧಿಸಲಾಗುವುದು. ಸಂಸ್ಥೆ/ಶಾಲೆ/ವಿದ್ಯಾರ್ಥಿಗಳು ಸಂಬಂಧಿಸಿದ ಪೂರಕ ದಾಖಲೆಗಳೊಂದಿಗೆ ಮಾದರಿ ಅರ್ಜಿಯೊಂದಿಗೆ ವಿವರವನ್ನು ಮಂಡಳಿಗೆ ಸಲ್ಲಿಸುವುದು.
7. **ಬ್ಯಾಚ್ ಬದಲಾವಣೆಗೆ ಅವಕಾಶವಿರುವುದಿಲ್ಲ.**
8. ಮೇಲಿನ ಎಲ್ಲಾ ನಿಯಮಗಳನ್ನು ಸಂಬಂಧಪಟ್ಟ ಗಣಕಯಂತ್ರ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು/ವಿದ್ಯಾರ್ಥಿಗಳು ತಪ್ಪದೇ ಪಾಲಿಸಲು ತಿಳಿಸಿದೆ. ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂದಿನ ತೊಂದರೆಗಳಿಗೆ ಅಭ್ಯರ್ಥಿಗಳು ಮತ್ತು ಶಿಕ್ಷಕರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

**ಆನ್‌ಲೈನ್‌ನಲ್ಲಿ ಅರ್ಜಿಯನ್ನುಭರ್ತಿ ಮಾಡುವಾಗ ಗಮನಿಸಬೇಕಾದ ಅಂಶಗಳು:–**

ಆನ್ ಲೈನ್‌ನಲ್ಲಿ ಅರ್ಜಿಯನ್ನು ಭರ್ತಿ ಮಾಡುವಾಗ ಅಭ್ಯರ್ಥಿಯ ಹೆಸರು, ತಂದೆಯ, ತಾಯಿಯ ಹೆಸರು ಮತ್ತು ಜನ್ಮ ದಿನಾಂಕವನ್ನು ಎಸ್.ಎಸ್.ಎಲ್.ಸಿ.ಅಂಕಪಟ್ಟಿಯಲ್ಲಿ ನಮೂದಿಸಿರುವಂತೆ ತಪ್ಪಿಲ್ಲದೆ ನಮೂದಿಸಬೇಕು ಹಾಗೂ ವಿಷಯ ಮತ್ತು ವಿಷಯ ಸಂಕೇತವನ್ನು ತಪ್ಪಿಲ್ಲದಂತೆ ಸ್ಪಷ್ಟವಾಗಿ ನಮೂದಿಸುವುದು. (ಉದಾ:–41XY ಅಥವಾ 42 XY)

**ಅಭ್ಯರ್ಥಿಯ ಇತ್ತೀಚಿನ ಅಂದರೆ ಮೂರು ತಿಂಗಳ ಒಳಗೆ ತೆಗೆಸಿದ ಎರಡು ಭಾವಚಿತ್ರಗಳನ್ನು ಮಾದರಿ ಅರ್ಜಿಯೊಂದಿಗೆ ಸಂಸ್ಥೆ/ಶಾಲೆಯ ಮುಖ್ಯಸ್ಥರಿಗೆ ನೀಡುವುದು. ಅಭ್ಯರ್ಥಿಗಳ ಭಾವಚಿತ್ರವು ಸ್ಕ್ಯಾನಿಂಗ್ ಆಗುವುದರಿಂದ ಭಾವಚಿತ್ರದ ಹಿಂಪರದೆಯು ಮತ್ತು ಧರಿಸುವ ಉಡುಪು ಸಾದಾ ಬಣ್ಣ ಇರುವಂತೆ ಗಮನ ವಹಿಸುವುದು.** ವಿದ್ಯಾರ್ಥಿಗಳು ನೀಡಿದ ಎರಡು ಭಾವಚಿತ್ರಗಳನ್ನು ಸಂಸ್ಥೆಯಲ್ಲಿಯೇ ಉಳಿಸಿಕೊಳ್ಳುವುದು. **ಅದರಲ್ಲಿ ಒಂದು ಭಾವಚಿತ್ರವನ್ನು ಸ್ಕ್ಯಾನ್ ಮಾಡಿ30–40K.B. JPEG FORMAT ಹಾಗೂ ಸಹಿಯನ್ನು 15–20K.B. JPEG FORMAT ನಲ್ಲಿ ಆನ್‌ಲೈನ್ ಅರ್ಜಿಯಲ್ಲಿ UPLOAD ಮಾಡುವುದು. ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಸುತ್ತೋಲೆಗಳು, ಜ್ಞಾಪನ, ಫಲಿತಾಂಶ ಇತ್ಯಾದಿ ವಿವರಗಳನ್ನು ಮಂಡಳಿಯ ವೆಬ್‌ಸೈಟ್www.kseeb.kar.nic.in ನಲ್ಲಿ ವೀಕ್ಷಿಸಬಹುದು.**

(ಕೆ.ಎಸ್.ಮಣಿ)
ನಿರ್ದೇಶಕರು
(ಇತರೆ ಪರೀಕ್ಷೆಗಳು)

**ಪ್ರತಿಗಳು :–**

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ನಿರ್ದೇಶಕರು (ಇ.ಪ) ರವರ ಹಾಗೂ ಕಾರ್ಯದರ್ಶಿಗಳು ಆಪ್ತ ಶಾಖೆಗೆ.

3. ರಾಜ್ಯದಎಲ್ಲಾ ವಿಭಾಗೀಯ ಮಟ್ಟದ ಪ್ರಾದೇಶಿಕ ಪರೀಕ್ಷಾ ಮಂಡಳಿಯ ಕಾರ್ಯದರ್ಶಿಗಳಿಗೆ ಬೆಂಗಳೂರು, ಮೈಸೂರು, ಕಲ್ಬುರ್ಗಿ ಮತ್ತು ಬೆಳಗಾಂ ವಿಭಾಗರವರಿಗೆಮುಂದಿನಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಮುಂದಿನ ಕ್ರಮಕ್ಕಾಗಿ.
5. ಹಿರಿಯ ಸಹಾಯಕ ನಿರ್ದೇಶಕರು, ವಾಣಿಜ್ಯ ಶಾಖೆ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗರಸ್ತೆ, ಬೆಂಗಳೂರು–1.
6. ಶಾಖಾಧಿಕಾರಿಗಳು, ಕಂಪ್ಯೂಟರ್ ಶಾಖೆಯವರಿಗೆ ಸಂಬಂಧಪಟ್ಟ ಅಧಿಸೂಚನೆಯನ್ನು ವೆಬ್ ಸೈಟ್‌ನಲ್ಲಿ ಅಳವಡಿಸಲು ಸಲ್ಲಿಸಿದೆ.
7. ರಾಜ್ಯದ ಎಲ್ಲಾ ಗಣಕಯಂತ್ರ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಗೆ ಸೂಕ್ತ ಕ್ರಮಕ್ಕಾಗಿ.
8. ಕಛೇರಿ ಪ್ರತಿ.